ಕರ್ನಾಟಕ ವಿಧಾನ ಪರಿಷತ್ತು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರ ಹೆಸರು:	ಶ್ರೀ ಎಸ್. ರವಿ
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:	1563
ಉತ್ತರಿಸ ಬೇಕಾದ ದಿನಾಂಕ:	18.03.2020
ಉತ್ತರಿಸುವ ಸಚಿವರು	ವಿ. ಸೋಮಣ್ಣ, ವಸತಿ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
(ಅ)	ರಾಜ್ಯದಲ್ಲಿ ಅನುಷ್ಠಾನಗೊಳ್ಳುತ್ತಿರುವ ವಸತಿ ಸೌಲಭ್ಯಗಳ ಯೋಜನೆ ಅಡಿಯಲ್ಲಿ, ಜನವರಿ-2020ರ ಅಂತ್ಯಕ್ಕೆ ರಾಜ್ಯದಲ್ಲಿ ಬೇರೆ ಬೇರೆ ಹಂತಗಳಲ್ಲಿ ಪ್ರೋತ್ಸಾಹಧನ ಪಾವತಿಯಾಗದ ಕಾರಣ ಆಯ್ಕೆಯಾಗಿ ಪೂರ್ಣಗೊಳಿಸಲಾಗದ ಹಾಗೂ ಪೂರ್ಣಗೊಳಿಸಿರುವ ಬೇರೆ ಬೇರೆ ಹಂತಗಳಲ್ಲಿ ಪೂರ್ಣಗೊಳ್ಳದೇ ಬಾಕಿ ಉಳಿದಿರುವ ಮನೆಗಳ ಸಂಖ್ಯೆ ಎಷ್ಟು;	ರಾಜ್ಯಾದ್ಯಂತ ವಿವಿಧ ವಸತಿ ಯೋಜನೆಯಡಿ ವಿವಿಧ ಹಂತಗಳಲ್ಲಿರುವ ಪ್ರಗತಿಯಲ್ಲಿರುವ ಒಟ್ಟು 2.23 ಲಕ್ಷ ಮನೆಗಳಲ್ಲಿ ಸಹಾಯಧನವನ್ನು ಪಾವತಿಸುವುದು ಬಾಕಿ ಇರುತ್ತದೆ. ಈ ಮನೆಗಳನ್ನುವಿಜಿಲ್ ಆಪ್ ಮೂಲಕ ಜಿ.ಪಿ.ಎಸ್.ಗೆ ಅಳವಡಿಸಲಾಗುತ್ತಿದ್ದು, ಅದರಲ್ಲಿ ಫೆಬ್ರುವರಿ-2020 ಅಂತ್ಯಕ್ಕೆ 39,773 ಮನೆಗಳಿಗೆ ಅನುದಾನ ಬಿಡುಗಡೆ ಮಾಡಲಾಗಿದ್ದು, ಇನ್ನೂ 1.83 ಲಕ್ಷ ಮನೆಗಳು ಆಯ್ಕೆಯಾಗಿ ಪೂರ್ಣಗೊಳಿಸಲಾದ ಹಾಗೂ ಬೇರೆಬೇರೆ ಹಂತಗಳಲ್ಲಿ ಪೂರ್ಣಗೊಳ್ಳದೇ ಬಾಕಿ ಉಳಿರುತ್ತದೆ.
(ಆ)	ತಾಂತ್ರಿಕ ದೋಷಗಳನ್ನು ಹೊರತುಪಡಿಸಿ, ಬೇರೆ ಬೇರೆ ಹಂತಗಳ ಪ್ರಗತಿಗೆ ಹಣ ಪಾವತಿಸಲು ಬಾಕಿ ಉಳಿದಿರುವ ಒಟ್ಟು ಮೊತ್ತವೆಷ್ಟು;	ವಿವಿಧ ವಸತಿ ಯೋಜನೆಯಡಿ ವಿವಿಧ ಹಂತದಲ್ಲಿ ಪ್ರಗತಿಯಲ್ಲಿರುವ ಮನೆಗಳಿಗೆ ಫೆಬ್ರುವರಿ-2020 ಅಂತ್ಯದ ವರೆಗೂ ಒಟ್ಟು ಅನುದಾನ ರೂ.845.27 ಕೋಟಿಗಳನ್ನು ಪಾವತಿಸಲು ಬಾಕಿ ಇರುತ್ತದೆ.
(ಇ)	ಆಯ್ಕೆಗೊಂಡ ಫಲಾನುಭವಿಯ ಪೂರ್ವಭಾವಿ ನಿರ್ದೇಶನದ ಕೋ-ಆರ್ಡಿನೇಟ್ಸ್ ಪ್ರಗತಿ ವರದಿ ಮತ್ತು ಫೋಟೋ ಪ್ರತಿಗಳನ್ನು ತಂತ್ರಾಂಶದಲ್ಲಿ ಇಂದೀಕರಿಸಿದ್ದಾಗ್ಯೂ ಫಲಾನುಭವಿಗಳಿಗೆ ಹಣ ನಿಗಧಿತ ಅವಧಿಯಲ್ಲಿ ಪಾವತಿಸದಿರಲು ಕಾರಣಗಳೇನು? (ವರದಿ ನೀಡುವುದು)	ಅಗಸ್ಟ-2019 ಅಂತ್ಯದವರೆಗೂ ಜಿ.ಪಿ.ಎಸ್ ಆಧಾರಿತ ಭೌತಿಕ ಪ್ರಗತಿಗೆ ಅನುಗುಣವಾಗಿ ಅನುದಾನ ಬಿಡುಗಡೆ ಮಾಡಲಾಗಿದೆ ಆದರೆ, ವಸತಿ ಯೋಜನೆಯಡಿ ಅನುದಾನ ದುರ್ಬಳಕೆ ತಡೆ ಹಿಡಿಯುವ ಉದ್ದೇಶದಿಂದ ದಿನಾಂಕ:16-11-2019ರ ಸರ್ಕಾರಿ ಆದೇಶದನ್ವಯ ಈಗಾಗಲೇ ಪ್ರಗತಿಯಲ್ಲಿರುವ ಹಾಗೂ ಅನುದಾನಕ್ಕೆ ಬಾಕಿ ಇರುವ ಮನೆಗಳನ್ನು ಮತ್ತೊಮ್ಮೆ Geo ಆಧಾರಿತ ವಿಜಿಲ್ ಆಫ್ ಮೂಲಕ ಪರಿಶೀಲಿಸಲು

		ಗ್ರಾಮೀಣ ಪ್ರದೇಶದಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು ಹಾಗೂ ನಗರ ಪ್ರದೇಶದಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಪರಿಶೀಲನಾ ಸಮಿತಿ ರಚಿಸಲಾಗಿರುತ್ತದೆ. ಅದರಂತೆ ಪ್ರಗತಿಯಲ್ಲಿರುವ ಹಾಗೂ ಪೂರ್ಣಗೊಂಡಿರುವ 2.23 ಲಕ್ಷ ಮನೆಗಳನ್ನು ವಿಜಿಲ್ ಆಫ್ ಗೆ ಅಳವಡಿಸಲಾಗಿದ್ದು, ಅದರಲ್ಲಿ ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾ ಪಂಚಾಯತ್ ಹಾಗೂ ಜಿಲ್ಲಾಧಿಕಾರಿಗಳು ಶಿಫಾರಸ್ಸು ಮಾಡಿದ 39733 ಮನೆಗಳು ಅರ್ಹವಿದ್ದು, ಈ ಮನೆಗಳಿಗೆ ಫೆಬ್ರುವರಿ-2020 ಅಂತ್ಯಕ್ಕೆ ಒಟ್ಟು 183.72 ಕೋಟಿ ಅನುದಾನ ಫಲಾನುಭವಿಗಳ ಖಾತೆಗೆ ನೇರವಾಗಿ ಬಿಡುಗಡೆ ಮಾಡಲಾಗಿದೆ. ಇನ್ನೂಳಿದ ಫಲಾನುಭವಿಗಳ ಪರಿಶೀಲನಾ ಕಾರ್ಯ ಪ್ರಗತಿಯಲ್ಲಿದ್ದು, ತ್ವರಿತವಾಗಿ ಅನುದಾನ ಬಿಡುಗಡೆ ಮಾಡಲಾಗುವುದು.

ವ ಇ 119 ಹೆಚ್‌ಎಂ 2020

(ವಿ.ಸೋಮಣ್ಣ)
ವಸತಿ ಸಚಿವರು